## ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯ ಕಾರ್ಯಚಟುವಟಿಕೆಗಳ ಪಕ್ಷಿನೋಟ ಮತ್ತು 2010–2011ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ

### ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯ ಸ್ಥಾಪನೆ ಮತ್ತು ಸ್ವರೂಪ

ಕರ್ನಾಟಕದಲ್ಲಿ ಗ್ಯಾಸೆಟಿಯರ್‌ಗಳ ಪರಂಪರೆಗೆ ಸುದೀರ್ಘ ಇತಿಹಾಸ ಹಾಗೂ ಮಹತ್ವವಿದೆ. ಸ್ವಾತಂತ್ರ್ಯಪೂರ್ವದಲ್ಲಿ ಬೆಂಜಮಿನ್ ಲೂಯಿ ರೈಸ್ ಅವರು ಮೈಸೂರು ಪ್ರಾಂತದಲ್ಲಿ 1876–77ರ ನಡುವೆ 'ಮೈಸೂರು ಮತ್ತು ಕೂರ್ಗ್ ಗ್ಯಾಸೆಟಿಯರ್‌ಯನ್ನು ಎರಡು ಭಾಗಗಳಲ್ಲಿ ಪ್ರಕಟಿಸಿದ್ದರು. ನಂತರ 1898ರಲ್ಲಿ ಅವರೇ ಸಂಪುಟಗಳ ಪರಿಷ್ಕೃತ ಆವೃತ್ತಿಯನ್ನು ಕೊಡಗು ಜಿಲ್ಲೆಯನ್ನೂ ಒಳಗೊಂಡಂತೆ ಮೂರು ಭಾಗಗಳಲ್ಲಿ ಪುನ: ಸಂಪಾದಿಸಿ ಪ್ರಕಟಿಸಿದರು. ಮುಂಬೈ ಮತ್ತು ಮದರಾಸ್ ಪ್ರಾಂತಗಳ ಅಧೀನದಲ್ಲಿದ್ದ ಕರ್ನಾಟಕದ ಧಾರವಾಡ, ಬೆಳಗಾವಿ, ಬಿಜಾಪುರ, ಕೆನರಾ, ಸೌತ್ ಕೆನರಾ ಹಾಗೂ ಬಳ್ಳಾರಿ ಜಿಲ್ಲೆಗಳಿಗೆ ಸಂಬಂಧಿಸಿದ ಸಂಪುಟಗಳನ್ನು ಅಂದಿನ ಬ್ರಿಟೀಷ್ ಸರ್ಕಾರವು ಪ್ರಕಟಿಸಿತ್ತು. ಈ ಎಲ್ಲಾ ಸಂಪುಟಗಳನ್ನು ಆಧುನಿಕ ಕಂಪ್ಯೂಟರ್ ತಂತ್ರಾಂಶದಿಂದ ಸ್ಕ್ಯಾನ್ ಮಾಡಿ ಪುನರ್ ಮುದ್ರಿಸುವ ಕಾರ್ಯವನ್ನು ಇಲಾಖೆಯು ಈಗಾಗಲೇ ಸಾಕಾರಗೊಳಿಸಿರುತ್ತದೆ. ಹೈದರಾಬಾದ್ ಕರ್ನಾಟಕದ ಬೀದರ್, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳ ಸಂಪುಟಗಳು ನಿಜಾಮ್ ನೇತೃತ್ವದಲ್ಲಿ 1909ರಲ್ಲಿ ಪ್ರಕಟಗೊಂಡವು. ಇದೇ ಸಂಪುಟಗಳ ಸಪ್ಲಿಮೆಂಟ್‌ಗಳು 1941ರಲ್ಲಿ ನಿಜಾಮ್ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಪ್ರಕಟಗೊಂಡವು.

ಸ್ವಾತಂತ್ರ್ಯಾನಂತರ ಮೈಸೂರು ರಾಜ್ಯದಲ್ಲಿ ಗ್ಯಾಸೆಟಿಯರ್ ರಚನಾ ಪರಂಪರೆಗೆ ಹೊಸ ಉತ್ತೇಜನ ದೊರೆಯಲು ಮುಖ್ಯ ಕಾರಣವೆಂದರೇ, ಭಾರತ ಸರ್ಕಾರವು 1955ರಲ್ಲಿ ಪರಿಣತರನ್ನೊಳಗೊಂಡ ತಜ್ಞರ ಸಮಿತಿಯನ್ನು ಶಿಕ್ಷಣ ಇಲಾಖೆಯ ಅಧೀನದಲ್ಲಿ ರಚಿಸಿ ಜಿಲ್ಲಾ ಗ್ಯಾಸೆಟಿಯರ್‌ಗಳ ಪ್ರಕಟಣೆಗೆ ಹೊಸ ಚಿಂತನೆಯೇ ಮೂಲ ಸ್ಫೂರ್ತಿಯಾಯಿತು. ಆ ವೇಳೆಗಾಗಲೇ ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಗ್ಯಾಸೆಟಿಯರ್ ಘಟಕಗಳು ಅಸ್ತಿತ್ವಕ್ಕೆ ಬಂದು ಜಿಲ್ಲಾ ಗ್ಯಾಸೆಟಿಯರ್‌ಗಳ ರಚನೆಯನ್ನು ಪ್ರಾರಂಭಿಸಿದ್ದುವು; ಭಾರತ ಸರ್ಕಾರವು ಕೇಂದ್ರ ಗ್ಯಾಸೆಟಿಯರ್ ಘಟಕವನ್ನು ಆರಂಭಿಸಿದ ಮೇಲೆ ಮತ್ತು 1955ರಲ್ಲಿ ವಿದ್ವಾಂಸರನ್ನೊಳಗೊಂಡಂತೆ ನೇಮಕಗೊಂಡಿದ್ದ 'ಚಿಂತಕರ ಸಮಿತಿ'ಯು ನೀಡಿದ ವರದಿಯ ಪರಿಣಾಮವಾಗಿ ಜಿಲ್ಲಾ ಗ್ಯಾಸೆಟಿಯರ್‌ಗಳ ಪ್ರಕಟಣಾ ಕಾರ್ಯವು ರಾಷ್ಟ್ರಾದ್ಯಂತ ಚುರುಕುಗೊಂಡಿತು.

ಕರ್ನಾಟಕದಲ್ಲಿ ಏಕೀಕರಣದ ತರುವಾಯ ಎರಡನೇ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಅಂದರೆ ಜನವರಿ 1958ರಲ್ಲಿ ಗ್ಯಾಸೆಟಿಯರ್ ಘಟಕವು

ಕೇವಲ ತಾತ್ಕಾಲಿಕ ಆಧಾರದ ಮೇಲೆ ಕಾರ್ಯಾರಂಭ ಮಾಡಿತು. ಸರ್ಕಾರಿ ಆದೇಶ ಸಂಖ್ಯೆ:GAD 4 SGT 57 dated 27-12-1957 ರನ್ವಯ ಗ್ಯಾಸೆಟಿಯರ್ ಇಲಾಖೆಗೆ ರಾಜ್ಯ ವಾರ್ತಾಧಿಕಾರಿಗಳಾಗಿದ್ದ ಶ್ರೀ ಬಿ.ಎನ್.ಶ್ರೀಸತ್ಯನ್ ಅವರನ್ನು ಪ್ರಥಮ ಮುಖ್ಯ ಸಂಪಾದಕರನ್ನಾಗಿ ನೇಮಿಸಲಾಯಿತು. ದಿನಾಂಕ 27–02–1958ರಂದು ವಿದ್ಯುಕ್ತವಾಗಿ ಗ್ಯಾಸೆಟಿಯರ್ ಘಟಕವು ಅಸ್ತಿತ್ವಕ್ಕೆ ಬಂದಿತು. ಈ ಘಟಕವು ಆರಂಭಗೊಂಡ ನಂತರ ಜಿಲ್ಲಾ ಗ್ಯಾಸೆಟಿಯರ್‌ಗಳನ್ನು ಪ್ರಕಟಿಸುವ ಯೋಜನೆಯನ್ನು ಎರಡನೇ ಪಂಚವಾರ್ಷಿಕ ಯೋಜನೆಯಿಂದ ಆರಂಭಿಸಿ ಐದನೇ ಪಂಚವಾರ್ಷಿಕ ಯೋಜನೆ (1974–79) ಅಂತ್ಯದಲ್ಲಿ ಎಲ್ಲಾ ಜಿಲ್ಲಾ (19 ಜಿಲ್ಲೆಗಳಿಗೆ) ಸಂಪುಟಗಳನ್ನೂ ಪ್ರಕಟಿಸುವ ಯೋಜನೆಯನ್ನು ಚಾಲ್ತಿಗೊಳಿಸಲಾಯಿತು. ಗ್ಯಾಸೆಟಿಯರ್‌ಗಳಲ್ಲಿ ರಚಿತವಾದ ಅಧ್ಯಾಯಗಳನ್ನು ಪರಾಮರ್ಶಿಸುವ ಸಲುವಾಗಿ ಇತರೆ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿದ್ದಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಹಲವು ಪರಿಣಿತರನ್ನೊಳಗೊಂಡ ಸಲಹಾ ಸಮಿತಿಯನ್ನು ಕೇಂದ್ರ ಗ್ಯಾಸೆಟಿಯರ್ ಘಟಕದ ಮಾರ್ಗದರ್ಶನದ ಮೇರೆಗೆ ರಾಜ್ಯದಲ್ಲೂ ರಚಿಸಲಾಯಿತು. ಹೀಗೆ ಇಲಾಖೆಯಿಂದ ಪ್ರಕಟವಾಗುವ ಎಲ್ಲಾ ಗ್ಯಾಸೆಟಿಯರ್‌ಗಳ ಅಧ್ಯಾಯಗಳನ್ನು ಕೂಲಂಕಷವಾಗಿ ಪರಾಮರ್ಶಿಸಿ ಆದಷ್ಟೂ ವಸ್ತುನಿಷ್ಠವಾಗಿ ಹಾಗೂ ಕರಾರುವಕ್ಕಾಗಿ ಸಿದ್ಧಪಡಿಸಲು, ಗ್ಯಾಸೆಟಿಯರ್ ಇಲಾಖೆಗೆ ಗ್ಯಾಸೆಟಿಯರ್ ಸಲಹಾ ಸಮಿತಿಯ ನೆರವಾಗುತ್ತದೆ. ಈ ರೀತಿಯ ಪ್ರಕಟಣೆಗೆ ಮುಖ್ಯ ಸಂಪಾದಕರ ನಿರ್ವಹಣೆ ಮತ್ತು ಜವಾಬ್ದಾರಿಯು ಅತ್ಯಂತ ಗುರುತರವಾಗಿರುತ್ತದೆ.

**ಪರಿಷ್ಕೃತ ಜಿಲ್ಲಾ ಗ್ಯಾಸೆಟಿಯರ್‌ಗಳ ಪ್ರಕಟಣೆ**

ಕೇಂದ್ರ ಸರ್ಕಾರದ ಮಾದರಿಯಲ್ಲೇ ಆಂಗ್ಲ ಆವೃತ್ತಿಯಲ್ಲಿ 19 ಜಿಲ್ಲೆಗಳಿಗೂ ಸಂಬಂಧಿಸಿದ ಗ್ಯಾಸೆಟಿಯರ್ ಸಂಪುಟಗಳನ್ನು ಪ್ರಕಟಿಸುವ ಕಾರ್ಯವು ರಾಜ್ಯದಲ್ಲಿ 1990ರಲ್ಲಿ ಪೂರ್ಣಗೊಂಡಿತು. ಆನಂತರ ಇಲಾಖೆಯು ಜಿಲ್ಲಾ ಗ್ಯಾಸೆಟಿಯರ್‌ಗಳನ್ನು ಸಂಪೂರ್ಣವಾಗಿ ಪರಿಷ್ಕರಿಸಿ ರಾಜ್ಯ ಸರ್ಕಾರದ ಭಾಷಾ ನೀತಿಗನುಸಾರವಾಗಿ ಕನ್ನಡ ಭಾಷೆಯಲ್ಲಿ ಪ್ರಕಟಿಸುವ ನೂತನ ಯೋಜನೆಯನ್ನು ಜಾರಿಗೆ ತಂದಿತು. ಅದರಂತೆ, ಈ ಯೋಜನೆಯನ್ನು ಜಾರಿಗೊಳಿಸುವಾಗ ಮುಖ್ಯ ಸಂಪಾದಕರ ಮಾರ್ಗದರ್ಶನದಲ್ಲಿ ಜಿಲ್ಲಾ ಗ್ಯಾಸೆಟಿಯರ್‌ನ ಅಧ್ಯಾಯಗಳನ್ನು ಪುನರ್ ವಿಂಗಡಿಸಿ 19 ಅಧ್ಯಾಯಗಳಿಗೆ ಬದಲಾಗಿ 17 ಅಧ್ಯಾಯಗಳಿಗೆ ನಿಗದಿಪಡಿಸಲಾಯಿತು. ಆ ಪ್ರಕಾರ ಪರಿಷ್ಕೃತ ಜಿಲ್ಲಾ ಗ್ಯಾಸೆಟಿಯರ್‌ಗಳ ಪ್ರಕಟಣೆಯ ಮಾಲಿಕೆಯಲ್ಲಿ ಈವರೆಗೆ ಇಲಾಖೆಯು ಕೊಡಗು, ಧಾರವಾಡ, ಗುಲಬರ್ಗಾ, ವಿಜಾಪುರ, ಮಂಡ್ಯ, ಕೋಲಾರ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲಾ ಗ್ಯಾಸೆಟಿಯರ್‌ಗಳ ಪರಿಷ್ಕೃತ ಆವೃತ್ತಿಗಳು ಪ್ರಕಟಗೊಂಡಿವೆ. ಇವುಗಳ ಪೈಕಿ ವಿಜಾಪುರ (ಆಂಗ್ಲ ಆವೃತ್ತಿ), ಮಂಡ್ಯ (ಆಂಗ್ಲ ಆವೃತ್ತಿ) ದಕ್ಷಿಣ ಕನ್ನಡ ಪರಿಷ್ಕೃತ

ಕನ್ನಡ ಆವೃತ್ತಿ ಮತ್ತು 'ಎ ಹ್ಯಾಂಡ್ ಬುಕ್ ಆಫ್ ಕರ್ನಾಟಕ (ಆಂಗ್ಲ ಆವೃತ್ತಿ) ಇವುಗಳು ಮುದ್ರಣ ಕಾರ್ಯ ಮುಗಿದಿದ್ದು ಲೋಕಾರ್ಪಣೆಗೆ ಸಿದ್ಧವಾಗಿರುತ್ತದೆ. ಈ ಮಧ್ಯೆ 1986ರಲ್ಲಿ ಇಲಾಖೆಯನ್ನು ಖಾಯಂಗೊಳಿಸಲಾಯಿತು. ಆನಂತರದಲ್ಲಿ ಗ್ಯಾಸೆಟಿಯರ್ ಸಲಹಾ ಸಮಿತಿಯ ನಿರ್ಣಯದಂತೆ 1993ರಲ್ಲಿ ಕನ್ನಡೇತರರಿಗೂ ಜಿಲ್ಲಾ ಗ್ಯಾಸೆಟಿಯರ್‌ಗಳ ಜ್ಞಾನ ಭಂಡಾರವನ್ನು ಒದಗಿಸುವ ದೃಷ್ಟಿಯಿಂದ ಮತ್ತು ಹೊರರಾಜ್ಯಗಳೊಂದಿಗೆ ಗ್ಯಾಸೆಟಿಯರ್‌ಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ ಉದ್ದೇಶದಿಂದ ಪರಿಷ್ಕೃತ ಕನ್ನಡ ಗ್ಯಾಸೆಟಿಯರ್ ಆವೃತ್ತಿಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸುವ ಯೋಜನೆಯನ್ನೂ ಕೈಗೆತ್ತಿಕೊಳ್ಳಲಾಯಿತು. ಈ ಮಾಲಿಕೆಯಲ್ಲಿ ಈವರೆಗೆ ಕೊಡಗು (1993) ಧಾರವಾಡ (2003) ಗುಲಬರ್ಗಾ, ವಿಜಾಪುರ ಹಾಗೂ ಮಂಡ್ಯ ಸಂಪುಟಗಳು ಪ್ರಕಟಗೊಂಡಿದ್ದು 2009–10ನೇ ಸಾಲಿನಲ್ಲಿ ಜಿಲ್ಲಾ ಪರಿಷ್ಕೃತ ಗ್ಯಾಸೆಟಿಯರ್‌ನ ಆಂಗ್ಲ ಆವೃತ್ತಿಯ ಮುದ್ರಣ ಕಾರ್ಯವು ಪ್ರಗತಿಯಲ್ಲಿತ್ತು. ಕನ್ನಡ ಆವೃತ್ತಿಗಳ ಜೊತೆಗೆ ಆಂಗ್ಲ ಆವೃತ್ತಿಯ ಸಂಪುಟಗಳು ಪ್ರಕಟಗೊಳ್ಳುತ್ತಿರುವುದರಿಂದ ವಿದ್ವತ್ ಲೋಕವೂ ಸೇರಿದಂತೆ ಸಾಮಾನ್ಯ ಓದುಗರಿಗೆ ಹೆಚ್ಚು ಉಪಯುಕ್ತವಾಗುತ್ತಿದೆ. ಆದರೆ ಇಲಾಖೆಯಲ್ಲಿ ಸಂಪಾದಕರ ಹುದ್ದೆಗಳು ಅಧಿಕ ಖಾಲಿ ಇರುವುದರಿಂದ ಕಾರ್ಯ ಬಾಹುಳ್ಯಯಿಂದಾಗಿ ಜಿಲ್ಲಾ ಗ್ಯಾಸೆಟಿಯರ್‌ಗಳ ಭಾಷಾಂತರ (ಆಂಗ್ಲ) ಕಾರ್ಯವನ್ನು ಹೊರಗಿನ ವಿದ್ವಾಂಸರಿಂದ ಮಾಡಿಸಬೇಕಾದ ಅನಿವಾರ್ಯತೆ ಎದುರಾಗಿದೆ.

ಪ್ರಸ್ತುತ ಇಲಾಖೆಯು ಮೂಲಯೋಜನೆಯಾದ ಜಿಲ್ಲಾ ಗ್ಯಾಸೆಟಿಯರ್‌ಗಳ ಪರಿಷ್ಕರಣಾ ಕಾರ್ಯದ ಜೊತೆಗೆ ಹಲವು ವಿಶಿಷ್ಟ ಪ್ರಕಟಣೆಗಳನ್ನೂ ಸಾಕಾರಗೊಳಿಸಿರುವುದು ಇಲಾಖೆಯ ಮಹತ್ವದ ಸಾಧನೆಯಾಗಿದೆ. ಇಲಾಖೆಯ ವಿಶೇಷ ಪ್ರಕಟಣೆಯಾದ 'ಎ ಹ್ಯಾಂಡ್ ಬುಕ್ ಆಫ್ ಕರ್ನಾಟಕ' ಆಂಗ್ಲ ಆವೃತ್ತಿಯನ್ನು 1995ರಲ್ಲೂ ಹಾಗೂ 'ಕರ್ನಾಟಕ ಕೈಪಿಡಿ'ಯನ್ನು ಕನ್ನಡದಲ್ಲೂ 1996ರಲ್ಲಿ ಪ್ರಕಟಿಸಲಾಯಿತು. ಬೇಡಿಕೆ ಹೆಚ್ಚಾದ ಕಾರಣ ಅನಂತರ, ಆಂಗ್ಲ ಆವೃತ್ತಿಯನ್ನು 2001 ಹಾಗೂ 2005ರಲ್ಲಿ ಪುನ: ಪ್ರಕಟಿಸಿದ್ದು ಇಲಾಖೆಯ ಹೆಗ್ಗಳಿಕೆಯಾಗಿದೆ. 2007–08ನೇ ಸಾಲಿನಲ್ಲಿ ಈ ಸಂಪುಟದ ಪುನರ್ ಪರಿಷ್ಕರಣೆ ಮತ್ತು ಇಂದೀಕರಣ ಕಾರ್ಯವನ್ನು ಇಲಾಖೆಯು ಕೈಗೆತ್ತಿಕೊಂಡಿದ್ದು, 2009–10 ಮುದ್ರಣ ಪೂರ್ಣಗೊಂಡು, ಲೋಕಾರ್ಪಣೆಗೆ ಸಿದ್ಧವಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಪ್ರಕಟಗೊಂಡಿದ್ದು, ನೂರು ವರ್ಷಗಳಿಗೂ ಮೀರಿ ಶಿಥಿಲವಾಗಿದ್ದ ಗ್ಯಾಸೆಟಿಯರ್ ಸಂಪುಟಗಳನ್ನು ಆಧುನಿಕ ಕಂಪ್ಯೂಟರ್ ತಂತ್ರಾಂಶ ಬಳಸಿ ಸ್ಕ್ಯಾನ್ ಮಾಡಿಸಿ ಅದನ್ನು ಪುನರ್ ಮುದ್ರಿಸುವ ವಿಶೇಷ ಯೋಜನೆಯನ್ನು 2000ದಲ್ಲಿ ಆರಂಭಿಸಿದ ಇಲಾಖೆಯು ಬಹಳಷ್ಟು ಮಟ್ಟಿಗೆ ಪೂರ್ಣಗೊಳಿಸಿದೆ. ಈ ಕಾರ್ಯಕ್ರಮವು ವಿದ್ವಾಂಸರ ಹಾಗೂ ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರುಗಳಿಂದ ವಿಶೇಷ

ಮಾನ್ಯತೆಯನ್ನು ಪಡೆದಿರುವುದು ಉಲ್ಲೇಖಾರ್ಹವಾಗಿದ್ದು, ಅವುಗಳ ಪುನರ್ ಮುದ್ರಣ ಕಾರ್ಯ ಇತ್ತೀಚಿನ ವರ್ಷಗಳಲ್ಲಿ ಇಲಾಖೆಯು ಪೂರ್ಣಗೊಳಿಸಿರುವ ಪ್ರಮುಖ ಸಾಧನೆಯಾಗಿದೆ. ಈವರೆಗೆ ಈ ಮಾಲಿಕೆಯಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಪ್ರಕಟಗೊಂಡಿದ್ದ ಬಿಜಾಪುರ, ಧಾರವಾಡ, ಬೆಳಗಾಂ, ಕೆನರಾ (ಉತ್ತರ ಕನ್ನಡ) ಗ್ಯಾಸೆಟಿಯರ್‌ಗಳನ್ನು ಹಾಗೂ

ಸೌತ್‌ಕೆನರಾ ಮತ್ತು ಬಳ್ಳಾರಿ ಮ್ಯಾನ್ಯುಯಲ್‌ಗಳನ್ನು ಕಂಪ್ಯೂಟರ್ ತಂತ್ರಾಂಶದಿಂದ ಸ್ಕ್ಯಾನ್ ಮಾಡಿಸಿ ಯಶಸ್ವಿಯಾಗಿ ಪುನರ್ ಮುದ್ರಿಸಿ ಪ್ರಕಟಿಸಲಾಗಿರುತ್ತದೆ. 2008–09ನೇ ಸಾಲಿನಲ್ಲಿ 1929–30ರಲ್ಲಿ ಪ್ರಕಟಗೊಂಡಿದ್ದ ಸಿ.ಹಯವದನರಾವ್ ಅವರು ಸಂಪಾದಿಸಿ ಪ್ರಕಟಿಸಿದ್ದ ಮೈಸೂರು ಗ್ಯಾಸೆಟಿಯರ್‌ನ ಐದು (8 ಪುಸ್ತಕಗಳನ್ನು) ಸಂಪುಟಗಳನ್ನು ಆಧುನಿಕ ಕಂಪ್ಯೂಟರ್ ತಂತ್ರಾಂಶದ ಸಹಾಯದಿಂದ ಸ್ಕ್ಯಾನ್ ಮಾಡಿಸಿ ಪುನರ್ ಮುದ್ರಿಸುವ ಕಾರ್ಯಕ್ರಮವನ್ನು 2008–09ನೇ ಸಾಲಿನಲ್ಲಿ ಹಮ್ಮಿಕೊಂಡಿದ್ದು, ಇದೇ ಸಾಲಿನಲ್ಲಿ ಪ್ರಕಟಿಸಲಾಗುವುದು. ಇತ್ತೀಚೆಗೆ ಪುನರ್ ಮುದ್ರಣವಾಗಿರುವ ಸೌತ್ ಕೆನರಾ ಮ್ಯಾನ್ಯುಯಲ್ ಹಾಗೂ ರೆವರೆಂಡ್ ಬಿ.ಎಲ್.ರೈಸ್ ಅವರು ಸಂಪಾದಿಸಿದ್ದ ಮೈಸೂರು ಮತ್ತು ಕೂರ್ಗ್ (ಮೂರು ಸಂಪುಟಗಳು) ಗ್ಯಾಸೆಟಿಯರ್‌ಗಳು ಇತ್ತೀಚೆಗೆ ಹೆಚ್ಚಿನ ಬೇಡಿಕೆಯನ್ನು ಹೊಂದಿವೆ. ಈಗಾಗಲೇ ಚಾಲ್ತಿಯಲ್ಲಿರುವ ಯೋಜನೆಯ ಜೊತೆಗೆ, ವಿಶೇಷ ಯೋಜನೆಯಾದ ತಾಲೂಕು ಗ್ಯಾಸೆಟಿಯರ್‌ಗಳನ್ನು ಪ್ರಕಟಿಸುವ ಯೋಜನೆಯನ್ನು ಇಲಾಖೆಯು ಕೈಗೆತ್ತಿಕೊಂಡಿದ್ದು, 2005–06ರಲ್ಲಿ ಪ್ರಥಮ ಪ್ರಾಯೋಗಿಕ ಯೋಜನೆಯಾಗಿ ಮೈಸೂರು ಜಿಲ್ಲೆಯ ಏಳು ತಾಲೂಕುಗಳಿಗೆ ಸಂಬಂಧಿಸಿದಂತೆ ತಾಲೂಕು ಗ್ಯಾಸೆಟಿಯರ್ ಸಂಪುಟಗಳನ್ನು 2006–07ನೇ ಸಾಲಿನಲ್ಲಿ ಹೊರ ವಿದ್ವಾಂಸರಿಂದ ಸಿದ್ಧಪಡಿಸಲಾಗಿದ್ದು, ವಿಶೇಷ ಸಲಹಾ ಸಮಿತಿಯು ಅವುಗಳನ್ನು ಪರಾಮರ್ಶಿಸಿ ಅನುಮೋದನೆ ನೀಡಿದ್ದು, ಪ್ರಸ್ತುತ ಮುದ್ರಣಕಾರ್ಯವು ಆರಂಭಗೊಂಡಿದ್ದು, ಅಂತಿಮ ಹಂತದಲ್ಲಿದೆ.

**ಇಲಾಖೆಯ ಗಣಕೀಕರಣದ ಮೈಲಿಗಲ್ಲುಗಳು**

ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಗಳು ಹಮ್ಮಿಕೊಂಡ ಇ' ಆಡಳಿತ (ವಿದ್ಯುನ್ಮಾನ ಆಡಳಿತ) ಕಾರ್ಯಕ್ರಮಕ್ಕೆ ಕ್ಷಿಪ್ರವಾಗಿ ಸ್ಪಂದಿಸುವ ದೃಷ್ಟಿಯಿಂದ ಅಂದಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನ್ಯ ಸಚಿವರು ಹಾಗೂ ಕಾರ್ಯದರ್ಶಿಗಳ ದೂರದರ್ಶಿತ್ವ ಮತ್ತು ಮಾರ್ಗದರ್ಶನದನ್ವಯ ಇಲಾಖೆಯು ಗಣಕೀಕರಣವನ್ನು ಯೋಜನೇತರ ಕಾರ್ಯಕ್ರದಡಿಯಲ್ಲಿ 2002–2003ರಲ್ಲಿ ಆರಂಭಿಸಿತು. ಸರ್ಕಾರದ ಆದೇಶದನ್ವಯ ಎಲ್ಲಾ ಲಭ್ಯವಿರುವ ಹಾಗೂ ಅಲಭ್ಯ

ಆಂಗ್ಲ ಗ್ಯಾಸೆಟಿಯರ್ ಸಂಪುಟಗಳನ್ನು (60,000 ಪುಟಗಳು –91 ಸಂಪುಟಗಳು) ಸ್ಕ್ಯಾನ್ ಮಾಡಿಸಿ ಒಂಭತ್ತು ಸಿಡಿ (ನೂರು ಸೆಟ್‌ಗಳ ಸಿಡಿ ರೋಮ್‌ಗಳಲ್ಲಿ) ZY image Software ವಿಶೇಷ ತಂತ್ರಾಂಶವನ್ನು ಬಳಸಿ ಸರ್ಚ್ ಮತ್ತು ಹೈಲೈಟ್ ಸೌಲಭ್ಯಗಳೊಂದಿಗೆ ಪ್ರಕಟಿಸಿದ್ದು ಒಂದು ಮಹತ್ತರವಾದ ಸಾಧನೆಯಾಗಿದೆ. ಈ ಸಿ.ಡಿ.ಗಳಲ್ಲಿ ಲಭ್ಯವಿರುವ ಮಾಹಿತಿಗಳನ್ನು ಇಲಾಖೆಯು ಈಗಾಗಲೇ ಸ್ಥಾಪಿಸಿರುವ ಸೂಕ್ಷ್ಮ ಪರದೆ ಕಿಯೋಸ್ಕ್‌ಗಳಲ್ಲಿ ಹಾಗೂ ಇಲಾಖಾ ವೆಬ್‌ಸೈಟ್‌ಗಳಲ್ಲಿ ಅಳವಡಿಸಿ ಪ್ರಸರಣಗೊಳಿಸಲಾಗಿದೆ. 2005–06ರಲ್ಲಿ ಯೋಜನೆಯಡಿಯಲ್ಲಿ ಕೋಲಾರ ಜಿಲ್ಲಾ ಪರಿಷ್ಕೃತ ಗ್ಯಾಸೆಟಿಯರ್‌ನ ಕನ್ನಡ ಆವೃತ್ತಿಯನ್ನು ಪ್ರಕಟಿಸಿ ಬಿಡುಗಡೆ ಮಾಡಲಾಗಿದೆ. 1997ರಲ್ಲಿ ಪ್ರಕಟಗೊಂಡಿದ್ದ ಗುಲಬರ್ಗಾ ಪರಿಷ್ಕೃತ ಜಿಲ್ಲಾ ಗ್ಯಾಸೆಟಿಯರ್‌ನ ಆಂಗ್ಲ ಭಾಷಾಂತರ ಆವೃತ್ತಿಯನ್ನು ಪ್ರಕಟಿಸಿ ಲೋಕಾರ್ಪಣೆ ಮಾಡಲಾಗಿದೆ. ಮಂಡ್ಯ ಜಿಲ್ಲಾ ಗ್ಯಾಸೆಟಿಯರ್ ಕನ್ನಡ ಆವೃತ್ತಿಯನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿದ್ದು, ಲೋಕಾರ್ಪಣೆಗೆ ಸಿದ್ಧವಿದೆ ಹಾಗೂ ಉಡುಪಿ ಜಿಲ್ಲಾ ಗ್ಯಾಸೆಟಿಯರ್ ಕನ್ನಡ ಆವೃತ್ತಿ ಸಹ ಬಿಡುಗಡೆಗೆ ಸಿದ್ಧವಿದೆ.

**ಹಳೇ ಮೈಸೂರು ಪ್ರಾಂತದ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ ಅಮೂಲ್ಯ ಗ್ರಂಥಗಳನ್ನು ಪ್ರಕಟಿಸುವ ಬಗ್ಗೆ.**

ಹಳೇ ಮೈಸೂರು ಪ್ರಾಂತದ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ ಅಮೂಲ್ಯ ಗ್ರಂಥಗಳನ್ನು ಪ್ರಕಟಿಸುವ ಕಾರ್ಯಕ್ರಮದಡಿ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಗೆ 2008–09ನೇ ಸಾಲಿಗೆ 50.00 ಲಕ್ಷ ರೂಗಳ ವಿಶೇಷ ಅನುದಾನ ಬಿಡುಗಡೆಯಾಗಿದೆ. ಇದರಡಿ ಅ) A journey from Madras through the countries of Mysore, Canara and Malabar – ನ ಗ್ರಂಥದ ಮೂರು ಸಂಪುಟಗಳ ಸ್ಕ್ಯಾನಿಂಗ್ ಮತ್ತು ಪುನರ್ ಮುದ್ರಣ (ಸರ್ ಫ್ರಾನ್ಸಿಸ್ ಬುಕಾನನ್ ರಚಿಸಿರುವ) ಆ) ಪ್ರೊ.ಎಂ.ವಿ.ಕೃಷ್ಣರಾವ್ ಮತ್ತಿತರರು ಸಂಪಾದಿಸಿರುವ Glimpses of Karnataka – a multicoloured coffee table book ಸಂಪುಟದ ಪರಿಷ್ಕರಣೆ ಮತ್ತು ಪ್ರಕಟಣೆ ಮತ್ತು ಇ) ಡಾ॥ ಸೂರ್ಯನಾಥ ಕಾಮತ್ ರಚಿಸಿ ಕೊಟ್ಟಿರುವ Jewels of Administration on the Celebrated Dewans of Princely Mysore – ಅನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸುವುದು.

ಪಾರಂಪರಿಕ ಗ್ರಂಥಗಳ ಪುನರ್ ಮುದ್ರಣ ಯೋಜನೆಯಡಿ ಮೂರು ಅಮೂಲ್ಯ ಗ್ರಂಥಗಳನ್ನು 2009–10ನೇ ಸಾಲಿನಲ್ಲಿ ಪ್ರಕಟಿಸಲು ಕ್ರಮ

ಕೈಗೊಳ್ಳಲಾಗಿದ್ದು, ಕ್ರ.ಸಂ. 1 ರ ಸ್ಕ್ಯಾನಿಂಗ್ ಮತ್ತು ಪ್ರಕಟಣಾ ಕಾರ್ಯ ಮುಕ್ತಾಯವಾಗಿದ್ದು, ಉಳಿದ ಗ್ರಂಥಗಳನ್ನು ಸಧ್ಯದಲ್ಲೇ ಪ್ರಕಟಿಸಲಾಗುವುದು.

**ಹೈದರಾಬಾದ್ ರಾಜ್ಯದ ಜಿಲ್ಲೆಗಳಿಗೆ ಸಂಬಂಧಿಸಿದ ಗ್ಯಾಸೆಟಿಯರ್‌ಗಳ ಪುನರ್ ಮುದ್ರಣ**

ಅಂದಿನ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳಾದ ಗುಲಬರ್ಗಾ, ಬೀದರ್ ಮತ್ತು ರಾಯಚೂರು ಜಿಲ್ಲೆಗಳಿಗೆ ಸಂಬಂಧಿಸಿದ ಹಾಗೂ ಸ್ವಾತಂತ್ರ್ಯಪೂರ್ವದಲ್ಲಿ ಅಂದಿನ ಬ್ರಿಟೀಷ್ ಸರ್ಕಾರ ಪ್ರಕಟಿಸಿದ್ದ ಇಂಪೀರಿಯಲ್ ಗ್ಯಾಸೆಟಿಯರ್ ಪ್ರಾವಿನ್ಸಿಯಲ್ ಮಾಲಿಕೆಯಲ್ಲಿ ಪ್ರಕಟಗೊಂಡಿದ್ದ ಸಂಪುಟ ಹಾಗೂ ನಿಜಾಮ್ ಸರ್ಕಾರವು ಪ್ರಕಟಿಸಿರುವ ಮೂರು ಸಪ್ಲಿಮೆಂಟ್ಸ್‌ಗಳನ್ನು ಮೂರು ಸಂಪುಟಗಳಲ್ಲಿ ಆಧುನಿಕ ಕಂಪ್ಯೂಟರ್ ತಂತ್ರಾಂಶದ ಸಹಾಯದಿಂದ ಸ್ಕ್ಯಾನ್ ಮಾಡಿ ಪುನರ್ ಮುದ್ರಿಸುವ ಕಾರ್ಯವನ್ನು ಚಾಲ್ತಿಯಲ್ಲಿರುವ ಯೋಜನೆಯಡಿಯಲ್ಲಿ ಪ್ರಕಟಿಸಲು ಕ್ರಮಕೈಗೊಂಡಿದೆ.

**ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ 150 ನೇ ವರ್ಷಾಚರಣೆ**

ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ 150ನೇ ವರ್ಷಾಚರಣೆ ಅಂಗವಾಗಿ ಹಾಗೂ ಟಿಪ್ಪುಸುಲ್ತಾನ್ ಸ್ಮರಣಾರ್ಥವಾಗಿ ಕೇಂದ್ರ ಸರ್ಕಾರದಿಂದ 10.00 ಲಕ್ಷ ರೂ.ಗಳ ಅನುದಾನ ಬಿಡುಗಡೆಯಾಗಿದ್ದು, ಈ ಅನುದಾನದಲ್ಲಿ ದೇಶದ ಮತ್ತು ವಿವಿಧ ಪತ್ರಾಗಾರಗಳಲ್ಲಿರುವ ದಾಖಲೆಗಳನ್ನು ಆಧರಿಸಿ 'Tippu Sultan – A Crusader for change' ಗ್ರಂಥವನ್ನು ರಚಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಗ್ರಂಥ ರಚನೆಯನ್ನು ವಹಿಸಿದ್ದ ಡಾ॥ ವಸುಂಧರಾ ಫಿಲಿಯೋಜ಼ ರವರು ತಮ್ಮ ವೈಯಕ್ತಿಕ ಕಾರಣಗಳಿಂದಾಗಿ ಸಾಧ್ಯವಿಲ್ಲವೆಂದು ತಿಳಿಸಿದ ಹಿನ್ನೆಲೆಯಲ್ಲಿ ಗ್ರಂಥ ರಚನೆಯನ್ನು ಡಾ॥ ಎಚ್.ಪಿ.ಶಶಿಧರಮೂರ್ತಿ, ನಿವೃತ್ತ ಉಪನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಇವರಿಗೆ ನೀಡಲು ಕಾರ್ಯದರ್ಶಿಗಳು ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ ಇವರ ಅನುಮೋದನೆಯೊಂದಿಗೆ ಆದೇಶ ಹೊರಡಿಸಲಾಗಿದೆ. ಸದರಿ ವಿದ್ವಾಂಸರು ತಯಾರಿಸಿದ ಗ್ರಂಥದ ಅಧ್ಯಾಯಗಳನ್ನು ಸರ್ಕಾರವು ಈಗಾಗಲೇ ಸನ್ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ರಚಿಸಿರುವ ಪರಿಣಿತರ ಸಭೆಯ ಅನುಮೋದನೆಯ ನಂತರ ಇದೇ ಸಾಲಿನಲ್ಲಿ ಪ್ರಕಟಿಸಲಾಗುತ್ತದೆ.

# ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯ ವಾರ್ಷಿಕ 2010–11 ಕ್ರಿಯಾ ಯೋಜನೆಯು ಹೊಂದಿರುವ ಮಾಹಿತಿ/ಅಂಕಿಅಂಶಗಳು

- ಪ್ರಸಕ್ತ ಸಾಲಿನ ಅನುದಾನ ವ್ಯಯಕ್ಕೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳು

- ಕ್ರಿಯಾ ಯೋಜನೆ ಅನುದಾನದ ಹಂಚಿಕೆ ಒಳಗೊಂಡಂತೆ ಕಾರ್ಯಚಟುವಟಿಕೆಗಳು ಕಾರ್ಯಸೂಚಿ ಮತ್ತು ಕಾರ್ಯರೂಪಕ್ಕೆ ತರಲು ಹಮ್ಮಿಕೊಂಡಿರುವ ಯೋಜನೆಗಳು (ಅಚಿಟಜಚಿಜಜಾ ಆಿ ಇತಚಿಟಿ)

- 2009–10 ನೇ ಆರ್ಥಿಕ ಸಾಲಿನಲ್ಲಿ ಬಿಡುಗಡೆಯಾದ ಅನುದಾನಕ್ಕೆ ಶೀರ್ಷಿಕೆವಾರು ಆರ್ಥಿಕ ಪ್ರಗತಿಯ ತ:ಖ್ತೆ

- ಶೀರ್ಷಿಕೆವಾರು ಅನುದಾನದ ಭೌತಿಕ ಪ್ರಗತಿಯ ವಿವರಗಳು

**ಪ್ರಸಕ್ತ ಸಾಲಿನ ಅನುದಾನದ ವ್ಯಯಕ್ಕೆ ಹಮ್ಮಿಕೊಂಡಿರುವ ರೂಪುರೇಷೆಗಳು**
**2010–11 ನೇ ಸಾಲಿನಲ್ಲಿ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯ ಕಾರ್ಯಕ್ರಮಗಳಿಗಾಗಿ**
**ಒದಗಿಸಲಾದ ಅನುದಾನದ ವಿವರಗಳು**
**ಆಯವ್ಯಯದ ಸವಿವರ ವೆಚ್ಚ ಅಂದಾಜುಗಳು, ಸಂಪುಟ–8 ಪುಟ––––––––**
**ಗ್ಯಾಸೆಟಿಯರ್ ಮತ್ತು ಸಂಖ್ಯಾ ಟಿಪ್ಪಣಿ**
**(ಉಚಿದಜಾಣಜಜಾಡಿ ಚಿಟಜ ಖಾಚಿಣಣಾಖಿಚಿಟ ಒಜಟಾಡಿ)**

**(ಲಕ್ಷ ರೂ.ಗಳಲ್ಲಿ)**

| ಕ್ರಮಸಂಖ್ಯೆ | ಲೆಕ್ಕಶೀರ್ಷಿಕೆ | ಯೋಜನೇತರ | ಯೋಜನೆ |
|---|---|---|---|
| 1. | 3454–02–110–0–01–059<br>ಜಿಲ್ಲಾ ಗ್ಯಾಸೆಟಿಯರ್‌ಗಳ ಪರಿಷ್ಕರಣೆ (Revision of District Gazetteer) | | 20.00 |
| 2. | 3454–02–110–0–02<br>ಯೋಜನೆ<br>ಸಾಮಗ್ರಿ ಮತ್ತು ಸರಬರಾಜು | ಇಲ್ಲ | |
| | **ಒಟ್ಟು** | | **20.00** |

## 2009–10ನೇ ಸಾಲಿನಲ್ಲಿ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯು ಹಮ್ಮಿಕೊಂಡಿದ್ದ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಸಾಧನೆಗಳು (ಅಚಿಟಜೂಟಿಜಜಿ ಱಿ ಇಱಜೂಟಿಣ)

| ಕ್ರ.ಸಂ. | ಲೆಕ್ಕಶೀರ್ಷಿಕೆ | ಹಮ್ಮಿಕೊಳ್ಳಲಾದ ಉದ್ದೇಶಿತ ಕಾರ್ಯಕ್ರಮಗಳು | ಸಾಧನೆ |
|---|---|---|---|
| 1. | 3454–02–110–0–01 ಯೋಜನೆ) ಜಿಲ್ಲಾ ಗ್ಯಾಸೆಟಿಯರ್‌ಗಳ ಪರಿಷ್ಕರಣೆ, ಸಂಪಾದನೆ, ಮುದ್ರಣ ಹಾಗೂ ಪ್ರಕಟಣೆ | 1) ಯೋಜನಾ ಶೀರ್ಷಿಕೆ ಅಡಿ ಮುಂದುವರೆದ ಯೋಜನೆಯಡಿ 2006–07 ನೇ ಸಾಲಿನಲ್ಲಿ ಹಮ್ಮಿಕೊಂಡಿದ್ದ ಉಡುಪಿ ಜಿಲ್ಲಾ ಗ್ಯಾಸೆಟಿಯರ್, ಮಂಡ್ಯ ಜಿಲ್ಲಾ ಗ್ಯಾಸೆಟಿಯರ್ ಆಂಗ್ಲ ಆವೃತ್ತಿಯ ಭಾಷಾಂತರ, ಎ ಹ್ಯಾಂಡ್ ಬುಕ್ ಆಫ್ ಕರ್ನಾಟಕ ಸಂಪುಟಗಳ ಮುದ್ರಣ ಪೂರ್ಣಗೊಂಡಿದ್ದು, ಬಿಡುಗಡೆಗೆ ಸಿದ್ಧವಿದೆ. ತಾಲೂಕು ಗ್ಯಾಸೆಟಿಯರ್‌ನ ಮುದ್ರಣ ಕಾರ್ಯ ಅಂತಿಮ ಹಂತದಲ್ಲಿದೆ. | ಈ ಸಂಪುಟಗಳ ಮುದ್ರಣ ಪೂರ್ಣಗೊಂಡಿದ್ದು ಬಿಡುಗಡೆಗೆ ಸಿದ್ಧವಿದೆ. |
| | | 2) 2007–08ನೇ ಸಾಲಿನಲ್ಲಿ ಹಮ್ಮಿಕೊಂಡಿದ್ದ ಚಾಮರಾಜನಗರ ಜಿಲ್ಲಾ ಗ್ಯಾಸೆಟಿಯರ್‌ನ 12 ಅಧ್ಯಾಯಗಳನ್ನು ಸಲಹಾ ಸಮಿತಿಯಲ್ಲಿ ಪರಾಮರ್ಶಿಸಲಾಗಿದ್ದು, ಉಳಿದ ಐದು ಅಧ್ಯಾಯಗಳನ್ನು ಸದ್ಯದಲ್ಲೇ ಪರಾಮರ್ಶಿಸಿ, ಸಂಪಾದಿಸಿ, ಪ್ರಕಟಿಸಲಾಗುವುದು | ಬಾಕಿ ಇರುವ ಐದು ಅಧ್ಯಾಯಗಳನ್ನು ಸರ್ಕಾರವು ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಸಭೆಯಲ್ಲಿ ಅನುಮೋದನೆಯೊಂದಿಗೆ ಸಂಪಾದಿಸಿ ಪ್ರಕಟಿಸಲಾಗುವುದು. |
| | | ಱ) 3) 2008–09 ನೇ ಸಾಲಿನಲ್ಲಿ ಹಮ್ಮಿಕೊಂಡಿದ್ದ ರಾವ್ ಬಹದ್ದೂರ್ ಸಿ ಹಯವದನ ರಾವ್ ರವರು ಸಂಪಾದಿಸಿ ಪ್ರಕಟಿಸಿದ್ದ ಮೈಸೂರು ಗ್ಯಾಸೆಟಿಯರ್‌ನ ಎಂಟು ಪುಸ್ತಕಗಳ ಸ್ಕ್ಯಾನಿಂಗ್ ಮತ್ತು ಪುನರ್ ಮುದ್ರಣ | ಮುದ್ರಣ ಕಾರ್ಯ ಪ್ರಗತಿಯಲ್ಲಿದೆ |
| | | ಱಱ) ಹಳೇ ಮೈಸೂರು ಪ್ರಾಂತದ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ ಅಮೂಲ್ಯ ಗ್ರಂಥಗಳನ್ನು ಪ್ರಕಟಿಸುವ ಕಾರ್ಯಕ್ರಮದಡಿ ಈ ಕೆಳಗಿನ ಗ್ರಂಥಗಳನ್ನು ಪ್ರಕಟಿಸಲು ಉದ್ದೇಶಿಸಿದೆ.<br>1) A journey from Madras through the countries of Mysore, Canara and Malabar – Scanning and Reprint | ಮೂರು ಸಂಪುಟಗಳ ಸ್ಕ್ಯಾನಿಂಗ್ ಮತ್ತು ಮುದ್ರಣ ಕಾರ್ಯ ಮುಗಿದಿದ್ದು, ಲೋಕಾರ್ಪಣೆಗೆ ಸಿದ್ಧಪಡಿಸಲಾಗುತ್ತಿದೆ.<br>ಬಿಡುಗಡೆಗೆ ಸಿದ್ಧವಿದೆ |

| | | | |
|---|---|---|---|
| | | 2) Glimpses of Karnataka<br>3) Jewels of Administration | ಪ್ರಗತಿಯಲ್ಲಿದೆ<br>ಪ್ರಗತಿಯಲ್ಲಿದೆ. |
| | | ಖಖಖ) ಟಿಪ್ಪುಸುಲ್ತಾನ್ ಸ್ಮರಣಾರ್ಥ ಇಲಾಖೆಯು ರಚಿಸಲು ಉದ್ದೇಶಿಸಿರುವ 'Tippu Sultan – A Crusader for change' ಗ್ರಂಥದ ರಚನೆ | ಪರಿಣತ ಸಮಿತಿಯ ಅಧ್ಯಕ್ಷರ ಆದೇಶದಂತೆ ಗ್ರಂಥ ರಚನೆಯನ್ನು ಡಾ॥ ಎಚ್.ಪಿ.ಶಶಿಧರಮೂರ್ತಿ ರವರಿಗೆ ವಹಿಸಲು ಕ್ರಮಕೈಗೊಂಡಿದ್ದು, ಸೂಕ್ತ ಆದೇಶ ಹೊರಡಿಸಿದ್ದು, ಸಂಪುಟದ ರಚನಾ ಕಾರ್ಯ ಪ್ರಗತಿಯಲ್ಲಿದೆ. |
| | | ಖಗ) 1) 2009–10 ನೇ ಸಾಲಿನಲ್ಲಿ ಹಮ್ಮಿಕೊಂಡಿದ್ದ ಕೋಲಾರ ಜಿಲ್ಲಾ ಗ್ಯಾಸೆಟಿಯರ್ ಕನ್ನಡ ಆವೃತ್ತಿಯ ಆಂಗ್ಲ ಭಾಷಾಂತರ<br><br>2) ಹೈದರಾಬಾದ್ ಕರ್ನಾಟಕದ ಜಿಲ್ಲೆಗಳಾದ ಗುಲಬರ್ಗಾ, ರಾಯಚೂರು ಮತ್ತು ಬೀದರ್ ಜಿಲ್ಲೆಗಳಿಗೆ ಸಂಬಂಧಿಸಿದ ಹಾಗೂ ಸ್ವಾತಂತ್ರ್ಯ ಪೂರ್ವದಲ್ಲಿ ಅಂದಿನ ಬ್ರಿಟಿಷ್ ಹಾಗೂ ನಿಜಾಮ್ ಸರ್ಕಾರ ಪ್ರಕಟಿಸಿದ್ದ ಗ್ಯಾಸೆಟಿಯರ್‌ಗಳ ಸ್ಕ್ಯಾನಿಂಗ್ ಮತ್ತು ಪುನರ್ ಮುದ್ರಣ | ಭಾಷಾಂತರ ಕಾರ್ಯ ಮುಗಿದಿದ್ದು, ಸದರಿ ಸಂಪುಟಗಳ ಸಂಪಾದನಾ ಕಾರ್ಯ ಪ್ರಗತಿಯಲ್ಲಿದ್ದು, ಇದೇ ಸಾಲಿನಲ್ಲಿ ಪ್ರಕಟಿಸಲಾಗುತ್ತದೆ.<br><br>ಈ ಸಂಪುಟದ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಸ್ಕ್ಯಾನಿಂಗ್ ಹಾಗೂ ಮುದ್ರಣ ಕಾರ್ಯ ಪ್ರಗತಿಯಲ್ಲಿದೆ. ಈ ಮೂರು ಸಂಪುಟಗಳೂ ಸಹ ಇದೇ ಸಾಲಿನಲ್ಲಿ ಪ್ರಕಟಿಸಲಾಗುತ್ತದೆ. |

**2010–11ನೇ ಸಾಲಿನಲ್ಲಿ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಗೆ ಸಂಬಂಧಿಸಿದಂತೆ ಒದಗಿಸಲಾದ ಆಯವ್ಯಯ ಹಣಕ್ಕೆ ತಕ್ಕಂತೆ ಹಮ್ಮಿಕೊಂಡಿರುವ ಕಾರ್ಯಕ್ರಮದ ವಿವರಗಳು**

| ಕ್ರ.ಸಂ. | ಲೆಕ್ಕಶೀರ್ಷಿಕೆ | ಹಮ್ಮಿಕೊಳ್ಳಲಾದ ಉದ್ದೇಶಿತ ಕಾರ್ಯಕ್ರಮಗಳು | ಆಯವ್ಯಯದಲ್ಲಿ ಒದಗಿಸಲಾದ ಅನುದಾನ | ಷರಾ |
|---|---|---|---|---|
| 1) | 3454–02–110–0–01 ಯೋಜನೆ) ಜಿಲ್ಲಾ ಗ್ಯಾಸೆಟಿಯರ್‌ಗಳ ಪರಿಷ್ಕರಣೆ, ಸಂಪಾದನೆ, ಮುದ್ರಣ ಹಾಗೂ ಪ್ರಕಟಣೆ | ದಕ್ಷಿಣ ಕನ್ನಡ ಜಿಲ್ಲಾ ಗ್ಯಾಸೆಟಿಯರ್ ಪರಿಷ್ಕೃತ ಕನ್ನಡ ಆವೃತ್ತಿಯ ಆಂಗ್ಲ ಭಾಷಾಂತರದ ಸಂಪಾದನೆ ಮತ್ತು ಪ್ರಕಟಣೆ | 3.00 | ಇದರಲ್ಲಿ ಮುದ್ರಣ ಕಾಗದ ಖರೀದಿ ಮತ್ತು ಮುದ್ರಣ ವೆಚ್ಚ ಸೇರಿದೆ |
| | | ಉಡುಪಿ ಜಿಲ್ಲಾ ಗ್ಯಾಸೆಟಿಯರ್ ಕನ್ನಡ ಆವೃತ್ತಿಯ ಆಂಗ್ಲ ಭಾಷಾಂತರ – ಭಾಷಾಂತರಕಾರರ ಸಂಭಾವನೆ | 1.00 | ಇದರಲ್ಲಿ ಭಾಷಾಂತಕಾರರ ಸಂಭಾವನೆ ಮಾತ್ರ ಸೇರಿದೆ |
| | | 'ಎ ಹ್ಯಾಂಡ್ ಬುಕ್ ಆಫ್ ಕರ್ನಾಟಕ' ಆಂಗ್ಲ ಆವೃತ್ತಿಯನ್ನು ಕನ್ನಡ ಭಾಷೆಗೆ ಭಾಷಾಂತರಿಸಿ ಕರ್ನಾಟಕ ಕೈಪಿಡಿ ಯನ್ನು ಬಹುವರ್ಣೀಯವಾಗಿ ಪ್ರಕಟಿಸುವುದು. | 6.00 | ಇದರಲ್ಲಿ ಭಾಷಾಂತಕಾರರ ಸಂಭಾವನೆ, ಮುದ್ರಣ ಕಾಗದ ಖರೀದಿ ಮತ್ತು ಮುದ್ರಣ ವೆಚ್ಚ ಸೇರಿದೆ |
| | | 1982–83ರಲ್ಲಿ ಪ್ರಕಟಿಸಿದ್ದ ಕರ್ನಾಟಕ ರಾಜ್ಯ ಗ್ಯಾಸೆಟಿಯರ್ (2 ಸಂಪುಟಗಳು) ಆಂಗ್ಲ ಆವೃತ್ತಿಯ ಪರಿಷ್ಕರಣೆ ಮತ್ತು ಆಂಗ್ಲ ಆವೃತ್ತಿಯ ಇಂದೀಕರಣ | 5.50 | ಇದರಲ್ಲಿ ಮುದ್ರಣ ಕಾಗದ ಖರೀದಿ ಮತ್ತು ಮುದ್ರಣ ವೆಚ್ಚ ಸೇರಿದೆ. |
| | | ಇ–ಆಡಳಿತ ಯೋಜನೆ ಅಡಿ ಕಛೇರಿಯಲ್ಲಿರುವ ಗಣಕ ಯಂತ್ರಗಳನ್ನು ಬೈಬ್ಯಾಕ್ ಸ್ಕೀಂನಲ್ಲಿ ಬದಲಾಯಿಸುವುದು. | 1.50 | ಇದರಲ್ಲಿ ಕಂಪ್ಯೂಟರ್ ಗಳನ್ನು ಬೈಬ್ಯಾಕ್ ಸ್ಕೀಂನಲ್ಲಿ ಬದಲಾಯಿಸುವ ವೆಚ್ಚ ಸೇರಿದೆ. |
| | | ದಾವಣಗೆರೆ ಜಿಲ್ಲಾ ಗ್ಯಾಸೆಟಿಯರ್ ಆವೃತ್ತಿಯ ರಚನೆ, ಸಂಪಾದನೆ ಮತ್ತು ಮುದ್ರಣ | 3.00 | ಇದರಲ್ಲಿ ಮುದ್ರಣ ಕಾಗದ ಖರೀದಿ ಮತ್ತು ಮುದ್ರಣ ವೆಚ್ಚಗಳೂ ಸೇರಿವೆ. |

ಮುಖ್ಯ ಸಂಪಾದಕರು
ಕರ್ನಾಟಕ ಗ್ಯಾಸೆಟಿಯರ್ ಇಲಾಖೆ
ಬೆಂಗಳೂರು

ಕರ್ನಾಟಕ ಸರ್ಕಾರ

# ಕರ್ನಾಟಕ ಗ್ಯಾಸೆಟಿಯರ್ ಇಲಾಖೆ
# ಬೆಂಗಳೂರು

## 2010–11ನೇ ಸಾಲಿನಲ್ಲಿ ಹಮ್ಮಿಕೊಂಡಿರುವ
## ಕಾರ್ಯಚಟುವಟಿಕೆಗಳ ಪಕ್ಷಿನೋಟ
## ಮತ್ತು
## ವಾರ್ಷಿಕ ಕ್ರಿಯಾ ಯೋಜನೆ

# ಕರ್ನಾಟಕ ಸರ್ಕಾರ

# ಕರ್ನಾಟಕ ಗ್ಯಾಸೆಟಿಯರ್ ಇಲಾಖೆ

# ಬೆಂಗಳೂರು